ಕಾನನ

ಪ್ರಯೋಗಿಕ ಸಂಚಿಕೆ

ಇ-ಮಾಸಿಕ ಫೆಬ್ರವರಿ 2011



WCG

WILDLIFE CONSERVATION GROUP

ಕಾನನ

ಇ-ಮಾಸಿಕ ಪ್ರಯೋಗಿಕ ಸಂಚಿಕೆ



ಲೇಖನಗಳು

* ಹಕ್ಕಿಲೋಕ - ನಾಗೇಶ್.ಓ.ಎಸ್
* ಬರಿದಾಗುತ್ತಿರುವ ವನ್ಯಲೋಕ - ಎಸ್.ಎಂ.ನಾಯರ್
* LIFE (ಕವನ) - ಶಂಕರಪ್ಪ.ಕೆ.ಪಿ

ಅನಿಸಿಕೆಗೆ

E-mail: kaanana.mag@gmail.com

ಮುಖಪುಟ : ಸೂರ್ಯಾಸ್ತ ಮತ್ತು ಹುಲ್ಲುಕಡ್ಡಿ.

ಸಂಪಾದಕೀಯ

ಪ್ರೀತಿಯ ಓದುಗರೇ. . . .

ಕಳೆದ ಸಂಚಿಕೆಯಲ್ಲಿ ಎಸ್.ಎಂ.ನಾಯರ್‌ರವರ ‘ನಮ್ಮ ವನ್ಯ ಸಂಪದ’ ಎಂಬ ಲೇಖನ ಪ್ರಕಟವಾಗಿತ್ತು. ಅದೇ ವಿಷಯದ ಮುಂದಿನ ಭಾಗವಾದ ‘ಬರಿದಾಗುತ್ತಿರುವ ವನ್ಯಲೋಕ’ ಎಂಬ ಲೇಖನವನ್ನು ಈ ಸಂಚಿಕೆಯಲ್ಲಿ ಪ್ರಕಟಿಸುತ್ತಿದ್ದೇವೆ. ಈ ಲೇಖನವು ಪರಿಸರದ ಬಗ್ಗೆ ಮತ್ತು ವನ್ಯಲೋಕದ ಬಗ್ಗೆ ಆರಿವು ಮೂಡಿಸುವ ಉದ್ದೇಶದಿಂದ ಮಾತ್ರ ಪ್ರಕಟಿಸಲಾಗಿದೆ.

ಅದೇ ರೀತಿ ಈ ಸಂಚಿಕೆಯಿಂದ ‘ಹಕ್ಕಿಲೋಕ’ ಎಂಬ ಶೀರ್ಷಿಕೆಯ ಮುಖಾಂತರ ಪಕ್ಷಿಗಳ ಪರಿಚಯ ಮತ್ತು ಜೀವನ ಶೈಲಿ, ಜೊತೆಯಲ್ಲಿ ವರ್ಣರಂಜಿತ ಹಕ್ಕಿಗಳ ಛಾಯಚಿತ್ರಗಳು ಮತ್ತು ನಾಗೇಶ್.ಓ.ಎಸ್. ರವರ ಲೇಖನಗಳನ್ನು ಪರಿಚಯಿಸುತ್ತಿದ್ದೆವೆ. ಹಾಗೂ ಶಂಕರಪ್ಪ.ಕೆ.ಪಿ. ರವರ ‘LIFE’ ಎಂಬ ಸುಂದರವಾದ ಕವನವನ್ನು ನಿಮ್ಮ ಮುಂದೆ ನಯದಿಂದ ಬಿಚ್ಚಿಡುತ್ತಿದ್ದೇವೆ, ಇದರಲ್ಲಿ ಇಡಿ ಸೌರವ್ಯೂಹದಲ್ಲೇ ಜೀವಿಗಳಿರುವ ಏಕೈಕ ಗ್ರಹ ಭೂಮಿ, ಭೂಮಿಯಲ್ಲಿ ಮನುಷ್ಯ ಜೀವಿಯಲ್ಲದೆ ಪ್ರತಿಯೊಂದು ಪಕ್ಷಿ, ಪ್ರಾಣಿ, ಕೀಟ, ಮರ–ಗಿಡ ಮುಂತಾದ ಅನೇಕ ಜೀವಿಗಳು ಭೂಮಿಯ ಮೇಲೆ ಬದುಕುತ್ತಿದ್ದಾವೆ, ಬದುಕಲು ಮನುಷ್ಯನಿಗಿರುವಷ್ಟೇ ಹಕ್ಕು ಎಲ್ಲಾ ಜೀವಿಗಳಿಗೂ ಇದೆ ಎಂಬುದನ್ನು ಲೇಖಕರು ಈ ಸಾಲುಗಳ ಮುಖಾಂತರ ವರ್ಣಿಸಿದ್ದಾರೆ.

ಅದೋ ಕಾಣುತಿದೆ ನೀಲಿಯಾ ಮಾಯೆ
ನಯದಿಂದ ಉತ್ತರಸಿದೆ ಭೂಮಿ
ಅನಂತ ಜೀವಿಗಳ ಹುಟ್ಟು ಸಾವಿನ ಚಕ್ರ
ನಾನೇ ಜೀವ.

ಭೂಮಿಯ ಮೇಲೆ ಅನಂತ ಜೀವಿಗಳು ಬದುಕಿವೆ ಮನುಷ್ಯನಂತೆಯೇ ಹುಟ್ಟು–ಸಾವಿನ ಚಕ್ರದಲ್ಲಿ ಅ ಜೀವಿಗಳಿಗೂ ಬದುಕಲು ಹಕ್ಕಿದೆ ಈ ಭೂಮಿಯಲಿ ಎಂದು ನಯದಿಂದ ಉತ್ತರಿಸುತ್ತಿದೆ. ಮನುಷ್ಯನಲ್ಲ ಭೂಮಿ. . .!

ಪ್ರಕೃತಿಯ ಬಗ್ಗೆ ಅರಿವು ಮೂಡಿಸುವ ನಮ್ಮ ಪುಟ್ಟ ಪತ್ರಿಕೆಯನ್ನು ಓದಿ ಸಲಹೆ ಸೂಚನೆಯನ್ನು ನಿಮ್ಮಿಂದ ಆಶಿಸುತ್ತೆವೆ. ಮತ್ತು ಈ ಪತ್ರಿಕೆಯು ನಿಮಗಾಗಿಯೇ ಇದೆ, ವನ್ಯಲೋಕ, ಕಾಡು, ಪ್ರಾಣಿ–ಪಕ್ಷಿಗಳು, ಮತ್ತು ಸಾಹಿತ್ಯ ವಿಚಾರಗಳು, ಕವನ, ಕಥೆಗಳು, ವಿಜ್ಞಾನ, ಪ್ರವಾಸ, ಛಾಯಚಿತ್ರಗಳು ಮುಂತಾದ ವಿಷಯಗಳನ್ನು ಲೇಖನಗಳ ಮೂಲಕ ಈ ಜಗತ್ತಿಗೆ ಸಾದರಪಡಿಸಬಹುದು. ಲೇಖನಗಳನ್ನು ಕಳುಹಿಸಬಹುದಾದ ಇ–ವಿಳಾಸ : kaanana.mag@gmail.com ಗೆ ಕಳುಹಿಸಿ.



ಹಕ್ಕಿಲೋಕ

ಪ್ರಪಂಚದಲ್ಲಿ ಹಾರಾಡಬಲ್ಲ ಜೀವಿಗಳೆಂದರೆ ಕೀಟ, ಬಾವಲಿ, ಹಕ್ಕಿಗಳು. ಆದರೆ ಇವುಗಳಲ್ಲಿ ಅತಿ ತೂಕವಿರುವ ವೇಗವಾಗಿ ಹಾರಬಲ್ಲ ಜೀವಿ ಎಂದರೆ ಪಕ್ಷಿಗಳು ಮಾತ್ರ. ಇವುಗಳ ಹಾರಾಟಕ್ಕೆ ಮುಖ್ಯ ಕಾರಣ ರೆಕ್ಕೆಗಳು ಈ ಪಕ್ಷಿಗಳನ್ನು ನೋಡಿಯೇ ಮನುಷ್ಯನು ಏರೋಪ್ಲೇನ್ ಕಂಡುಹಿಡಿದುದ್ದು.

ನಮ್ಮ ಭೂಮಿಯಲ್ಲಿ ಎಲ್ಲಾ ರೀತಿಯ ವಾತಾವರಣಗಳಿಗೂ ಹೊಂದುಕೊಂಡು ಎಲ್ಲಾ ಜಾಗಗಳಲ್ಲೂ ಅಂದರೆ ಹಿಮಾಲಯದಂತ ಕೊರೆಯುವ ಹಿಮಪರ್ವತ, ಸಮುದ್ರದ ನೀರು, ಕತ್ತಲುಬರಿತ ಕಾಡುಗಳು, ನೀರೇ ಸಿಗದಿರುವ ಮರುಭೂಮಿ ಮತ್ತು ಜನಭರಿತ ಪಟ್ಟಣಗಳಲ್ಲೂ ಬದುಕುತ್ತಿರುವ ಜೀವಿಗಳಲ್ಲಿ ಪಕ್ಷಿಗಳು ಒಂದಾಗಿವೆ. ಪಕ್ಷಿಗಳೆಂದಾಕ್ಷಣ ನಮ್ಮಲ್ಲಿ ಅವುಗಳ ವರ್ಣರಂಜಿತ ರೆಕ್ಕೆಗಳು, ಕೊಕ್ಕುಗಳ ರಚನೆ, ಚಿಲಿಪಿಲಿ ಕೂಗಾಟ, ಎಲ್ಲಾ ನಮ್ಮ ಕಣ್ಮುಂದೆ ಬರುತ್ತದೆ. ಪಕ್ಷಿಗಳ ಆಹಾರ ಶೈಲಿ, ಮರಿಗಳನ್ನು ಮತ್ತು ತಮ್ಮನ್ನು ಶತ್ರುಗಳಿಂದ ರಕ್ಷಿಸಿಕೊಳ್ಳುವ ಜಾಣತನ, ಗೂಡು ಕಟ್ಟುವ ವಿಧಾನ ಸಾವಿರಾರು ಮೈಲಿ ವಲಸೆ ಹೋಗುವುದು ಎಲ್ಲಾ ಆಶ್ಚರ್ಯ ಮೂಡಿಸುತ್ತವೆ.

ಭೂಮಿಗೆ ಪಕ್ಷಿಗಳು ನಮಗಿಂತ ಮೊದಲು ಬಂದವು. ಇವು ಸುಮಾರು 150 ಮಿಲಿಯನ್ ವರ್ಷಗಳಿಂದ ಬದುಕಿ ಬಂದಿವೆ ಎಂದು ನಂಬಲಾಗಿದೆ, ಆದರೆ ನಮ್ಮಲ್ಲಿ ಸಿಗುವ ದಾಖಲೆಗಳ ಪ್ರಕಾರ ಮೊದಲ ಪಕ್ಷಿ ಕಾಣಿಸಿಕೊಂಡದ್ದು ಸುಮಾರು 140 ಮಿಲಿಯನ್ ವರ್ಷದ ಹಿಂದೆ. ಪಕ್ಷಿವರ್ಗವನ್ನು ವೈಜ್ಞಾನಿಕವಾಗಿ ಪ್ರಾಣಿರಾಜ್ಯದ, ಕಶೇರುಕ ವಂಶಕ್ಕೆ ಸೇರಸಲಾಗಿದೆ. ಕಶೇರುಕ ವಂಶಕ್ಕೆ ಸೇರಿಸಲು ಮುಖ್ಯ ಕಾರಣ ಇವುಗಳಿಗಿರುವ ಬೆನ್ನು ಮೂಳೆ. ಇಂಗ್ಲಿಷ್‌ನಲ್ಲಿ ಈ ಕೆಳಗಿನಂತೆ ವಿಂಗಡಿಸುತ್ತಾರೆ. **Kingdom:Animalia, phylum: Vertebrates, Class: Aves.** ಈ ಪಕ್ಷಿವರ್ಗವನ್ನು 27 ಗಣಗಳಾಗಿ ಮತ್ತು ಈ 27 ಗಣಗಳನ್ನು 155 ಕುಟುಂಬಗಳಾಗಿ ವಿಂಗಡಿಸಿದ್ದಾರೆ, ಈ ಪಕ್ಷಿವರ್ಗದಲ್ಲಿ ನಾವು ಅತಿ ಸಣ್ಣ ಪಕ್ಷಿಯಾದ ‘ಹಮ್ಮಿಂಗ್‌ಬರ್ಡ್’ (ಇದರ ತೂಕ 1.6 ಗ್ರಾಂ) ನಿಂದ ಅತಿ ದೊಡ್ಡ ಪಕ್ಷಿಯಾಗಿರುವ ‘ಆಸ್ಟ್ರಿಚ್’ (ostrich) ಇದರ ತೂಕ 125 ಕೆ,ಜಿ. ತನಕ ಸುಮಾರು 9000 ಕ್ಕೂ ಹೆಚ್ಚು ಪ್ರಬೇಧಗಳನ್ನು ಕಾಣಬಹುದು.



- ನಾಗೇಶ್.ಓ.ಎಸ್



ಬರಿದಾಗುತ್ತಿರುವ ವನ್ಯಲೋಕ

ವನ್ಯಪ್ರಾಣಿ ಹಾಗೂ ವನ್ಯ ಸಸ್ಯಗಳ ಆರೋಗ್ಯ ಮತ್ತು ಸುಸ್ಥಿತಿ ಅನೇಕ ಸಂಗತಿಗಳನ್ನು ಆಧರಿಸಿರುತ್ತದೆ. ಸೂಕ್ತ ಹವಾಮಾನ, ಆಹಾರ, ನೀರು ಮತ್ತು ಆಶ್ರಯ ಇವೇ ಮುಂತಾದವು ಎಲ್ಲ ಜೀವಿಗಳ ಮೂಲಭೂತ ಅಗತ್ಯಗಳಾಗಿರುತ್ತವೆ. ಈ ಸಂಪನ್ಮೂಲಗಳನ್ನು ಹಂಚಿಕೊಂಡು, ಪ್ರತಿಕೂಲ ಸಂದರ್ಭಗಳಲ್ಲೂ ಪರಸ್ಪರ ಹೊಂದಾಣಿಕೆ ಮಾಡಿಕೊಂಡು, ಅಲ್ಲಿನ ವಾಸಕ್ಷೇತ್ರಕ್ಕೆ ತಕ್ಕ ಪ್ರಮಾಣದಲ್ಲಿ ತಂತಮ್ಮ ಸಂಖ್ಯಾವೃದ್ಧಿ ಮಾಡಿಕೊಳ್ಳುತ್ತ ಸಸ್ಯ ಪ್ರಾಣಿಗಳು ಸದೃಢಜೀವನ ನಡೆಸುತ್ತವೆವೆಂಬುದಕ್ಕೆ ಪ್ರತಿಯೊಂದು ಜೀವಮಂಡಲವೂ ಉದಾಹರಣೆಯಾಗಿದೆ. ಭೂಮಿಯ ಪರಿಸರದಲ್ಲಿ ಭಾರೀ ಬದಲಾವಣೆಗಳಾಗುತ್ತ ಬಂದಿದ್ದು, ಇಲ್ಲಿನ ಜೀವಿಗಳೆಲ್ಲ ಇಂಥ ಬದಲಾಗುತ್ತಿರುವ ಪರಿಸರಕ್ಕೆ ಮಾರ್ಪಾಡಾಗುತ್ತ ವಿಕಾಸವಾಗುತ್ತ ಇಂದು ನಾವು ಕಾಣುವ ಸ್ಥಿತಿಗೆ ಬಂದಿವೆ.

ನೈಸರ್ಗಿಕ ಜೀವ ಮಂಡಲಗಳ ವಿಕಾಸಕ್ಕೆ ಕೋಟ್ಯಾಂತರ ವರ್ಷಗಳೇ ತಗುಲಿವೆ. ಈ ಎಲ್ಲ ಜೀವಮಂಡಲಗಳ ಒಂದು ವೈಶಿಷ್ಟ್ಯವೇಂದರೆ, ಅಲ್ಲಿನ ನೈಸರ್ಗಿಕ ಸಮತೋಲನ ಹದಗೆಡದ ರೀತಿಯಲ್ಲಿ ಪ್ರತಿ ಜೀವಿಯೂ ತನ್ನ ಸಂಕುಲದ ಸಂಖ್ಯಾಸ್ಥಿರತೆಯನ್ನು ಕಾಪಾಡಿಕೊಂಡು ಬರುತ್ತದೆ. ಹೀಗಾಗುವ ಬದಲು, ಯಾವುದಾದರೂ ಒಂದು ಜೀವಿ ಮಾತ್ರ ವಂಶವೃದ್ಧಿ ಮಾಡಿಕೊಳ್ಳುತ್ತ ಹೋದರೆ ಕಾಲಕ್ರಮೇಣ ಅದರದ್ದೇ ಅತಿ ಸಂತಾನವಾಗಿ, ಅವುಗಳ ಆಹಾರಮೂಲ ಬರಿದಾಗುತ್ತ ಹೋಗುತ್ತದೆ. ಅನೇಕ ಪ್ರಾಣಿಗಳು ಭಾರೀ ಶೀಘ್ರಗತಿಯಲ್ಲಿ ಸಂತಾನವರ್ಧನೆ ಮಾಡಿಕೊಳ್ಳುತ್ತವೆ. ಕೀಟಗಳು ಏಕಕಾಲಕ್ಕೆ ಸಹಸ್ರಾರು ಮೊಟ್ಟೆಗಳನ್ನಿಡುತ್ತವೆ; ದಂಶಕ ವರ್ಗದ ಪ್ರಾಣಿಗಳ ಜೋಡಿ ಪ್ರತಿವರ್ಷ 100 ರಿಂದ 120 ಮರಿಗಳನ್ನು ಹಾಕುತ್ತದೆ. ಕೆಲವು ಮೀನುಗಳು ವಂಶವೃದ್ಧಿ ಒಂದೊಂದು ಋತುವಿನಲ್ಲಿ ಕೋಟ್ಯಂತರ ಮೊಟ್ಟೆ ಇಡುತ್ತವೆ. ಯಾವುದೇ ನಿರ್ಬಂಧವಿಲ್ಲದೆ ಒಂದೇ ಒಂದು ಜೋಡಿ ನೊಣಗಳು ನಿರಂತರ ವಂಶಾಭಿವೃದ್ಧಿ ಮಾಡುತ್ತ ಹೋದರೆ, ಕೇವಲ ಮೂರೇ ವರ್ಷಗಳಲ್ಲಿ ಭೂಮಿಯ ತೂಕವನ್ನೂ ಮೀರಿಸುವಷ್ಟು ಜನ್ಮ ನೀಡುಲು ಸಾಧ್ಯವಿದೆ ! ಅಪರೂಪಕ್ಕೆ ಮರಿ ಹಾಕುವ ಆನೆಗಳೂ ಇದಕ್ಕೆ ಹೊರತಾಗಿಲ್ಲ. ಒಂದು ಜೋಡಿ ಆನೆಗಳು ಕೇವಲ 750 ವರ್ಷಗಳಲ್ಲಿ ಸುಮಾರು190 ಲಕ್ಷ ಆನೆಗಳಸಂತಾನ ಸೃಷ್ಟಿಸಬಲ್ಲವೆಂದು ಸಂಖ್ಯಾತಜ್ಞರು ಹೇಳುತಾರೆ. ನಂಬಲಸಾಧ್ಯ ಸಂಗತಿಯಲ್ಲವೆ ಇದು? ಆದರೆ ನಿಸರ್ಗದಲ್ಲಿ ಇಂಥ ಪರಿಸ್ಥಿತಿ ಬರುತ್ತಿಲ್ಲ ಹೇಗೆ?

ಪ್ರಾಣಿಗಳ ಸಂಖ್ಯೆಯನ್ನು ಯಾರು ಹತೋಟಿಯಲ್ಲಿಡುತ್ತಾರೆ? ಎದ್ದು ಕಾಣುವ ಒಂದು ಅಂಶವೆಂದರೆ, ಅವೆಲ್ಲ ಆಹಾರಕ್ಕಾಗಿ ಪೈಪೋಟಿ ಮಾಡುತ್ತವೆ. ಒಂದೇ ವಂಶಕ್ಕೆ ಸೇರಿದ ಎಲ್ಲಾ ಜೀವಿಗಳೂ ಒಂದೇ ಬಗೆಯ ಆಹಾರಕ್ಕಾಗಿ ಮುಗಿಬೀಳುತ್ತವೆ. ಎಲ್ಲಕ್ಕೂ ಸಮಪ್ರಮಾಣದಲ್ಲಿ ಆಹಾರ ಸಿಗದೆ, ದುರ್ಬಲವಾದವೆಲ್ಲ ಸಾಯುತ್ತವೆ. ಪ್ರಾಣಿಗಳ ದಟ್ಟಣೆ ಹೆಚ್ಚಾಗುವುದು ಇನ್ನೊಂದು ಕಾರಣ: ಸೋಂಕುರೋಗ ಹಾಗೂ ಪೌಷ್ಟಿಕ ಆಹಾರದ ಅಭಾವದಿಂದಾಗಿ ಇನ್ನು ಕೆಲವು ಸಾಯುತ್ತವೆ. ಬೇಟೆ ಪ್ರಾಣಿಗಳ ಬಾಯಿಗೆ ತುತ್ತಾಗಿ ಇನ್ನಷ್ಟು ಗತಿಸುತ್ತವೆ. ಈ ಹಿಂದೆ ಹೇಳಿದ 'ಆಹಾರ ಸರಪಳಿ'ಯ ವ್ಯವಸ್ಥೆಯ ಪ್ರಕಾರ, ಮಾಂಸಾಹಾರಿ ಪ್ರಾಣಿಗಳು ಸಸ್ಯಾಹಾರಿ ಪ್ರಾಣಿಗಳನ್ನು ತಿನ್ನುವುದು ಪ್ರತಿಯೊಂದು ಜೀವಮಂಡಲದ ನೈಸರ್ಗಿಕ ಲಕ್ಷಣ. ಪ್ರಾಣಿಸಂಖ್ಯೆಯನ್ನು ಹದ್ದುಬಸ್ತಿನಲ್ಲಿಡಲು ಕಾರಣವಾಗುವ ಇನ್ನು ಕೆಲವು ಅಂಶಗಳೆಂದರೆ: ವಿಪರೀತ ಹವಾಮಾನ, ನೈಸರ್ಗಿಕ ವಿಕೋಪಗಳು, ವಾಸಕ್ಷೇತ್ರದ ನಿರ್ನಾಮ, ಅಂತೂ, ಪರಿಸರದ 'ಹೊರುವ ಸಾಮರ್ಥ್ಯ' ಎಷ್ಟಿದೆಯೆಂಬುದನ್ನು ನಿರ್ಧರಿಸಬಲ್ಲ ಈ ಎಲ್ಲ ಅಂಶಗಳಿಂದಾಗಿ ಪ್ರಾಣಿಗಳ ಸಂಖ್ಯೆ ನಿಯಂತ್ರಣದಲ್ಲಿರುತ್ತದೆ. ಅಲ್ಲಿನ ಸಂಪನ್ಮೂಲಗಳು ಎಷ್ಟು ಪ್ರಾಣಿಗಳ ಬದುಕಿಗೆ ಸಾಕಾಗುವಷ್ಟಿವೆಯೆಂಬ ಆಧಾರದ ಮೇಲೆ, ಎಲ್ಲ ಪ್ರಾಕೃತಿಕ ಜೀವ ಮಂಡಲಗಳೂ ನಿಗದಿತ ಸಂಖ್ಯೆಯ ಪ್ರಾಣಿಗಳಿಗೆ ಜೀವನಾಧಾರ ನೀಡುತ್ತವೆ. ಹೀಗೆ, ಜೀವ ಮಂಡಲದ ಈ 'ಹೊರುವ ಸಾಮರ್ಥ್ಯ'ವೆಂಬ ವಿಲಕ್ಷಣ ಸಂಗತಿಯೇ ಜೀವಿಸಂಖ್ಯೆಯ ಸೂಕ್ಷ್ಮ ಸಮತೋಲದ ರಕ್ಷಣೆಗೆ, ಪರಸ್ಪರ ಅವಲಂಬನೆಗೆ ಹಾಗೂ ಅಂತಸ್ಸಂಬಂಧಕ್ಕೆ ಕಾರಣವಾಗುತ್ತದೆ.

ಪ್ರತಿಯೊಂದು ಜೀವಮಂಡಲವೂ ಅಲ್ಲಿನ ಪರಿಸರಕ್ಕೆ ಹೊಂದಿಕೊಂಡ ವೈವಿಧ್ಯಮಯ ಜೀವಿಗಳಿಗೆ ಆಧಾರ ನೀಡಿದೆ. ಇಲ್ಲಿನ ಒಂದೊಂದು ಜೀವಿಯೂ ಇತರ ಜೀವಿಗಳ ಹಾಗೂ ಭೌತಿಕ ಪರಿಸರದ ಮಧ್ಯೆ ಕೊಂಡಿಯಾಗಿರುತ್ತದೆ; ಪುನರಾವರ್ತಿತ ಘಟನೆಗಳಲ್ಲಿ ಭಾಗಿಯಾಗಿರುತ್ತದೆ. ಸಸ್ಯಗಳು ಸಂಗ್ರಹಿಸಿದ ಶಕ್ತಿಯೆಲ್ಲ ಪ್ರಾಣಿಗಳಿಗೆ ವರ್ಗಾವಣೆಯಾಗುತ್ತದೆ. ಭೂಮಿಯಿಂದ ಸಂಗ್ರಹಿತವಾದ ಪೋಷಕಾಂಶಗಳು ಮತ್ತೆ ಸಾಯುವಿಕೆ ಹಾಗೂ ಕೊಳೆಯುವಿಕೆಯಿಂದಾಗಿ ಭೂಮಿಗೇ ಹಿಂದಿರುಗುತ್ತವೆ. ಸಾವು ಸಂಭವಿಸಿದಾಗೆಲ್ಲ ಹೊಸ ಜೀವದ ಅಂಕುರವಾಗುತ್ತದೆ. ವರ್ಷ ಮುಗಿದು ವರ್ಷಕ್ಕೆ, ಶತಮಾನ ಮುಗಿದು ಶತಮಾನಕ್ಕೆ, ಸಹಸ್ರ ಮುಗಿದು ಮುಂದೆ ಲಕ್ಷಾಂತರ ವರ್ಷಗಳ ಕಾಲಕ್ಕೂ ನಿರಂತರವಾಗಿ ಘಟಿಸುತ್ತಿರುವ, ಬಿಡಿಸಲಾರದ ಕ್ಲಿಷ್ಟತೆಯ ಈ

ನಾಟಕಕ್ಕೇ ನಾವು ಸರಳ ಭಾಷೆಯಲ್ಲಿ 'ನಿಸರ್ಗ ಸಮತೋಲ' ಎನ್ನುತ್ತೇವೆ.



ಮನುಷ್ಯ ಅವತರಿಸುವ ಎಷ್ಟೋ ಲಕ್ಷಾಂತರ ವರ್ಷಗಳ ಹಿಂದೆಯೇ ಅನೇಕ ಜೀವಸಂಕುಲಗಳು ನಿರ್ನಾಮವಾಗಿವೆ. ಆದಿಮಾನವರು ನಿಸರ್ಗದೊಂದಿಗೆ ಸಹಬಾಳ್ವೆ ಮಾಡಲು ಕಲಿತದ್ದರಿಂದಾಗಿ ಯಾವ ಜೀವಿಗಳೂ ನಿರ್ವಂಶವಾಗಲಿಲ್ಲ. ಆದರೆ ನಾಗರಿಕತೆ ವಿಶ್ವವ್ಯಾಪಿಯಾಗುತ್ತ ಬಂದು, ನಿಸರ್ಗದ ಸಂಪನ್ಮೂಲಗಳ ಬಳಕೆಯ ಪ್ರಮಾಣ ಹೆಚ್ಚುತ್ತ ಬಂದಹಾಗೆ, ವನ್ಯಜೀವಿಗಳ ಮೇಲೆ ವ್ಯತರಿಕ್ತ ಪರಿಣಾಮವಾಗತೊಡಗಿದೆ. ಮೃಗಬೇಟೆ, ಪರಿಸರ ಬದಲಾವಣೆ, ವನ್ಯ ವಾಸಕ್ಷೇತ್ರದ ಧ್ವಂಸ, ನೀರು, ಭೂಮಿ ಹಾಗೂ ವಾಯುಮಾಲಿನ್ಯ, ಮಾನವ ಜನಸಂಖ್ಯಾ ಸ್ಫೋಟ ಇವೆಲ್ಲವೂ ಇತ್ತೀಚಿನ ವರ್ಷಗಳಲ್ಲಿ ವನ್ಯಪ್ರಾಣಿಗಳ ನಿರ್ವಂಶಕ್ಕೆ ಕಾರಣವಾಗುತ್ತಿವೆ. ಹದಿನೇಳನೆ ಶತಮಾನದ ಈಚೆಗೆ ಸುಮಾರು 120 ಸ್ತನಿಗಳು ಹಾಗೂ 150 ಪಕ್ಷಿವಂಶಗಳು ನಿರ್ನಾಮವಾಗಿವೆ. ಔದ್ಯಮಿಕ ಯುಗದ ಆರಂಭವಾದಾಗಿನೀಚೆಗೆ ಮಾನವನ ಹಸ್ತಕ್ಷೇಪದಿಂದಾಗಿಯೇ ಪ್ರಾಣಿಗಳ ನಿರ್ವಂಶದ ಗತಿಯೂ ತೀವ್ರವಾಗುತ್ತ ಬಂದಿದೆ.

ವನ್ಯಜೀವಿಗಳ ಅವಸಾನ ಸ್ಥಿತಿಗೆ ಬರುವ ಪರಿ

ಪ್ರಾಣಿಗಳು ನೈಸರ್ಗಿಕವಾಗಿ ನಿರ್ವಂಶವಾಗುವುದು ಪ್ರಕೃತಿಯೇ ಆಯ್ಕೆ ಮಾಡಿಕೊಂಡ ವಿಕಾಸ ವಿಧಾನ. ವಿಕಾಸಪಥದಲ್ಲಿ ಪರಿಸರ ಪರಿಸ್ಥಿತಿ ಬದಲಾಗುತ್ತಿರುವ ಹಾಗೆ ಅದಕ್ಕೆ ಹೊಂದಿಕೊಂಡು ಬದುಕಬಲ್ಲ ಸಾಮರ್ಥ್ಯವುಳ್ಳ ಹೊಸ ಪ್ರಾಣಿಗಳ ಉದಯಕ್ಕೆ ಹಾದಿ ಮಾಡಿಕೊಡುವ ರೀತಿ ಇದು. ಆದರೆ ಇತ್ತೀಚಿನ ಇತಿಹಾಸದಲ್ಲಿ ಅನೇಕ ಜೀವಿಗಳು ನಿರ್ನಾಮವಾಗಲಿಕ್ಕೆ ಮನುಷ್ಯನ ವಿಧ್ವಂಸಕ ಕೃತ್ಯಗಳೇ ಕಾರಣವಾಗಿವೆ. ಡೊಡೊ, ಪ್ಯಾಸೆಂಜರ್ ಪಾರಿವಾಳ ಮತ್ತು ಭಾರತದ ಚೀತಾ ಇವೆಲ್ಲ ನಿಸರ್ಗದ ವಿಕಾಸದಿಂದಾಗಿ ನಿರ್ನಾಮವಾಗಿಲ್ಲ. ಅವೆಲ್ಲವನ್ನೂ ಹೇಳಹೆಸರಿಲ್ಲದಂತೆ ಬೇಟೆಯಾಡಿಯೇ ಮುಗಿಸಲಾಗಿದೆ. ಶೀಘ್ರ ಹೆಚ್ಚುತ್ತಿರುವ ಔದ್ಯಮೀಕರಣ, ಸಂಪನ್ಮೂಲಗಳ ವಿಪರೀತ ಬಳಕೆಯೇ ಮುಂತಾದ ಮಾನವ ಕೃತ್ಯಗಳ ಪರಿಣಾಮ ಭೂಮಿ, ನೀರು, ಗಾಳಿ, ಸಸ್ಯ ಮತ್ತು ಪ್ರಾಣಿಗಳ ಪರಿಸರದ ಮೇಲೆ ಆಗಿದರಿಂದಲೇ ಅನೇಕ ಜೀವಿಗಳು ನಿರ್ವಂಶವಾಗಿವೆ, ಇನ್ನು ಹಲವು ಜೀವಿಗಳು 'ಪ್ರತೀಕ್ಷಾ ಪಟ್ಟಿ'ಯಲ್ಲಿ ಸೇರಿವೆ.

ಇಲ್ಲಿ ಹೇಳಿದ'ಪ್ರತೀಕ್ಷಾ ಪಟ್ಟಿ'ಯಲ್ಲಿ ಬರುವ ಬಹುಸಂಖ್ಯಾತ ಪ್ರಾಣಿಗಳ ಸ್ಥಿತಿಗತಿ ಹೇಗಿದೆಯೆಂದರೆ, ನಾವೀಗ ತುರ್ತು ಗಮನ ಹರಿಸದಿದ್ದರೆ ಅವೆಲ್ಲ ನಿರ್ವಂಶವಾಗುತ್ತವೆ. ವಿಸ್ತೀರ್ಣವಾಗುತ್ತಿರುವ ನಗರಗಳು, ನಾಶವಾಗುತ್ತಿರುವ ಅರಣ್ಯಗಳು, ರಸ್ತೆ ನಿರ್ಮಾಣ, ರೈಲು ಮಾರ್ಗದ ನಿರ್ಮಾಣ, ಅಣೆಕಟ್ಟುಗಳ ನಿರ್ಮಾಣ, ಕೀಟನಾಶಕಗಳ ಅತಿಬಳಕೆಯ ಕೃಷಿ ಚಟುವಟಿಕೆ, ಮಾಲಿನ್ಯ ಮತ್ತು ಕಳ್ಳಬೇಟೆ ಇವೆಲ್ಲ ಸೇರಿ ವನ್ಯಪ್ರಾಣಿಗಳ ಸಂಖ್ಯೆ ಇಳಿಮುಖವಾಗಲು ಕಾರಣವಾಗುತ್ತಲೇ, ಅಳಿದುಳಿದವುಗಳ ವಾಸಕ್ಷೇತ್ರ ಕ್ಷೀಣಿಸಲಿಕ್ಕೂ ಕಾರಣವಾಗುತ್ತಿವೆ.

ನೆಲೆ ನಾಶ



ನೀವಿರುವ ಸ್ಥಳದಲ್ಲಿ ಒಂದು ಫ್ಯಾಕ್ಟರಿಯೋ ಅಥವಾ ಫುಟ್‌ಬಾಲ್ ಕ್ರೀಡಾಂಗಣವೋ ಬರಲಿಕ್ಕಿದೆ ಎಂದು ಊಹಿಸಿಕೊಳ್ಳಿ. ನಿಮಗರಿವಾಗುವ ಮೊದಲೇ ಹಠಾತಾಗಿ ಬುಲ್‌ಡೋಜರ್ ಬಂದ ನಿಮ್ಮ ಮನೆಯನ್ನು ಕೆಡವಿ, ನಿಮ್ಮ ಮನೆಯವರನು ಕೊಂದೋ ಗಾಯಗೊಳಿಸಿಯೋ ಇಡೀ ಕ್ಷೇತ್ರವನ್ನೇ ಹೊಸಕಿ ಹಾಕಿ ಹೋದರೆ ಹೇಗನ್ನಿಸುತ್ತದೆ? ನೀವು ಯಾರಲ್ಲಿಯೂ ದೂರುವಂತಿಲ್ಲ, ಎಲ್ಲಿಗೂ ಹೋಗುವಂತಿಲ್ಲ; ಬಿಸಿಲು, ಗಾಳಿ, ಮಳೆ ಚಳಿಗೆ ಸಿಕ್ಕಿ, ಹಸಿವೆ ನೀರಡಿಕೆ ಹಾಗೂ ರೋಗರುಜಿನಗಳಿಗೆ ಬಲಿಯಾಗುತ್ತೀರಿ. ನಿಮ ವಂಶದ ಎಲ್ಲೋ ಎದ್ದುಬಿದ್ದು ದೂರ ಸಾಗಿ ಬದುಕುಳಿಯಲು ಯತ್ನಿಸುತ್ತದೆ; ಯಶಸ್ಸು ಸಿಕ್ಕೀತು ಸೋತು ನಾಮಾವಶೇಷವಾದೀತು. ಮನುಷ್ಯನ 'ಅಭಿವೃದ್ಧಿ'ಯ ಆಕಾಂಕ್ಷೆ ಹಾಗೂ ಅವನ ಅತಿ ಪ್ರಸರಣದಿಂದಾಗಿ ವನ್ಯಜೀವಿಗಳಿಗೆ ಯಥಾವತ್ ಇದೇ ಸ್ಥಿತಿ ಬಂದಿದೆ. ಅರಣ್ಯನಾಶವೇ ವನ್ಯಜೀವಿಗಳ ನಿರ್ನಾಮಕ್ಕೆ ಬಹುಮಟ್ಟಿಗೆ ಕಾರಣವಾಗಿದೆ. ಹೆಚ್ಚುತ್ತಿರುವ ಜನಸಂಖ್ಯೆ ಹಾಗೂ ಸಂಪನ್ಮೂಲ ಬೇಡಿಕೆಯಿಂದಾಗಿ ಅರಣ್ಯಗಳ ಚೊಕ್ಕಟ ನಾಶ ಇಲ್ಲವೇ ಒತ್ತುವರಿ ಸದಾ ನದೆಯುತ್ತಿದೆ. ಕೃಷಿ ವಿಸ್ತರಣೆಗಾಗಿ, ಇಲ್ಲವೇ ನಗರ ನಿರ್ಮಾಣಕ್ಕಾಗಿ, ಇಲ್ಲವೇ ದನಕರುಗಳನ್ನು ಮೇಯಿಸಲಿಕ್ಕಾಗಿ ಅರಣ್ಯಗಳು ಬಲಿಯಾಗುತ್ತಿವೆ. ಮಾನವನ ಅಭಿವೃದ್ಧಿ ಹಾಗೂ ತಾಂತ್ರಿಕ ಪ್ರಗತಿಯಿಂದಾಗಿ ಸಂಪನ್ಮೂಲಗಳ ಬಳಕೆಯ ಗತಿ ತೀವ್ರವಾಗುತ್ತಿದೆ. ಮನೆ ಕಟ್ಟಲಿಕ್ಕೆ, ಪೀಠೋಪಕರಣ



ತಯಾರಿಸಲಿಕ್ಕೆ ಹಾಗೂ ಉರುವಲ ಸೌದೆಗೆಂದು ಅರಣ್ಯಗಳು ನಾಶವಾಗುತ್ತಿವೆ. ಕಾಗದ ತಯಾರಿಕೆಗೆ, ಅಂಟು, ರಾಳಗಳ ಉತ್ಪನ್ನಕ್ಕೆ, ಖನಿಜ ವಸ್ತುಗಳ ಗಣಿ ಕೆಲಸಕ್ಕೆ, ಕಟ್ಟಡ ನಿರ್ಮಾಣ ಚಟುವಟಿಕೆಯೇ ಮುಂತಾದ ಔದ್ಯಮಿಕ ಉದ್ದೇಶಗಳ ಪೂರೈಕೆಗೆಂದು ಅರಣ್ಯಗಳು ಬಲಿಯಾಗುತ್ತಿವೆ.

ಇದರಿಂದ ವನ್ಯಜೀವಿಗಳ ಆಹಾರ ಮೂಲಗಳು ಬರಿದಾಗುತ್ತವೆ. ಸಂತಾನೋತ್ಪತ್ತಿ ಕ್ರಿಯೆ ಕ್ಷೀಯವಾಗುತ್ತದೆ; ಮರಿಗಳ ಪಾಲನೆ ಪೋಷಣೆಗೆ ಗೂಡು ಕಟ್ಟುವುದೂ ಅಸಾಧ್ಯವಾಗುತ್ತದೆ. ಬದಲಾದ ಪರಿಸರಕ್ಕೆ ಹೊಂದಿಕೊಳ್ಳಬೇಕೋ, ವಲಸೆ ಹೋಗಬೇಕೋ, ಇದ್ದಲ್ಲೇ ಅಂತ್ಯ ಕಾಣಬೇಕೋ ವನ್ಯಜೀವಿಗಳಿಗೆ ಬೇರೆ ಮಾರ್ಗ ಉಳಿಯುತ್ತಿಲ್ಲ. ಅವುಗಳ ವಾಸಕ್ಷೇತ್ರ ಈ ಸ್ಥಿತಿಗೆ ಬರುತ್ತಿರುವುದರಿಂದ ನಮ್ಮ ದೇಶದ ಅನೇಕ ಪ್ರಾಣಿ ಸಂಕುಲಗಳು ಅಪರೂಪವಾಗುತ್ತಿವೆ. ವಿನಾಶದ ಅಂಚಿಗೆ ಬಂದಿವೆ. ನಮ್ಮ ಪ್ರಗತಿ ಮತ್ತೂ ಏಳಿಗೆಯ ಪೈಪೋಟಿಯಲ್ಲಿ ನಾವು ನಿಸರ್ಗದ ಸೂಕ್ಷ್ಮ ಸಮತೋಲನವನ್ನು ಬಿಗಡಾಯಿಸಿದ್ದೇವೆ.

ಮೃಗಹತ್ಯೆ ಮತ್ತು ಕಳ್ಳಬೇಟೆ



ಮನರಂಜನೆಗಾಗಿ, ಆಹಾರಕ್ಕಾಗಿ, ದಂತಕ್ಕಾಗಿ, ಚರ್ಮಕ್ಕಾಗಿ, ಉಣ್ಣೆಗಾಗಿ, ಕೊಂಬಿಗಾಗಿ ವನ್ಯಮೃಗಗಳನ್ನು ಬೇಟೆಯಾಡಿ ಕೊಲ್ಲುವುದು ಈಗಲೂ ನಡೆದೇ ಇದೆ. ಭಾರತದಲ್ಲಿ ಚೀತಾಗಳನ್ನು ಬೇಟೆಯಾಡಿಯೇ ನಿರ್ವಂಶ ಮಾಡಿದ್ದಾಯಿತು. ಚರ್ಮದ ಕಳ್ಳವ್ಯಾಪಾರಕ್ಕೆಂದೇ ಹುಲಿ, ಚಿರತೆ, ಜಿಂಕೆ, ಮೀನುಬೆಕ್ಕು, ಮೊಸಳೆ, ಹಾವು ಹಾಗೆಯೇ ಸುಂದರ ಗರಿಗಳ ಪಕ್ಷಿಗಳು ಲೆಕ್ಕ ಸಂಖ್ಯೆಯಿಲ್ಲದ ಪ್ರಮಾಣದಲ್ಲಿ ಹತವಾಗಿವೆ. ಆನೆಗಳು ದಂತಚೋರರಿಂದಾಗಿಯೇ ಸಾವಪ್ಪಿವೆ. ಘೇಂಡಾ ಕೊಂಬಿನಲ್ಲಿ ಕಾಮೋದ್ದೀಪಕ ಅಂಶಗಳಿವೆಯೆಂಬ ಮೂಢ ಕಲ್ಪನೆಯಿಂದಾಗಿಯೇ ಅನೇಕ ಘೇಂಡಾಮೃಗಗಳು ಬಲಿಯಾಗುತ್ತಿವೆ. ಇಂಥ ಬೇಟೆಯನ್ನೂ ಕಳ್ಳಸಾಗಣೆಯನ್ನೂ ನಿರ್ಬಂಧಿಸಲು ನಮ್ಮ ದೇಶದಲ್ಲಿ ಕಾನೂನುಗಳಿಗೆಯಾದರೂ, ಆಶೆಬುರುಕರು, ವ್ಯಾಪರಿಗಳು ಹಾಗೂ ನಿರ್ಯಾತಗಾರರು ಅಂಥ ಕಾನೂನುಗಳನ್ನೆಲ್ಲ ಉಲ್ಲಂಘಿಸುತ್ತಾರೆ. ಇದು ಸಾಲದೆಂಬಂತೆ ವೈದ್ಯಕೀಯ ಸಂಶೋಧನೆಗೆಂದು, ಅಪರೂಪದ ಜೀವಂತ ವನ್ಯ ಸ್ತನಿ, ಪಕ್ಷಿ ಹಾಗೂ ಉರಗಗಳ ಮಾರಾಟ ನಡೆಯಿತ್ತದೆ.

ಮಾಲಿನ್ಯ

ಔದ್ಯಮಿಕ ಚಟುವಟಿಕೆಗಳಿಂದಾಗಿ ನೆಲ, ಜಲ, ವಾಯುಮಾಲಿನ್ಯ ಉಂಟಾದರೆ ಅದರ ವಿಪರೀತ ಪರಿಣಾಮ ಕೇವಲ ನಮ್ಮ ಆರೋಗ್ಯದ ಮೇಲಷ್ಟೇ ಅಲ್ಲ, ಇತರ ಪ್ರಾಣಿಗಳ ಆರೋಗ್ಯ ಹಾಗೂ ಸುಸ್ಥಿತಿಯ ಮೇಲೂ ಕಂಡುಬರುತ್ತದೆ. ಕೈಗಾರಿಕಾ ಸ್ಥಾವರಗಳಿಂದ ಹೊರಬೀಳುವ ಕೊಳಚೆ ಪದಾರ್ಥಗಳು ಕೆರೆಗೆ, ನದಿಗೆ ಹಾಗೂ ಸಾಗರಕ್ಕೂ ಸೇರಿ ಜಲಚರಗಳ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತವೆ. ಡಿಡಿಟಿ ಮತ್ತು ಡೀಲ್‌ಡ್ರಿನ್‌ನಂಥ ಕೀಟನಾಶಕಗಳು ಮನುಷ್ಯನಿಗೆ ಉಪಕಾರಿಯಾದ ಹಲವು ಕೀಟಗಳನ್ನು ನಾಶ ಮಾಡುವುದರ ಜೊತೆಗೇ, ವನ್ಯಸ್ತೋಮವನ್ನು ಕಷ್ಟಕ್ಕೀಡು ಮಾಡುತ್ತವೆ.



ಎರಡನೇ ಮಹಾಯುದ್ಧದ ತರುವಾಯ ಸೊಳ್ಳೆ ನಿಯಂತ್ರಣಕ್ಕೆಂದು ಡಿಡಿಟಿಯನ್ನು ವ್ಯಾಪಕವಾಗಿ ಬಲಸಿದ ಮೇಲೆ, ಈಗ ಕೃಷಿ ಭೂಮಿಯಲ್ಲಿನ ಮತ್ತು ಗೋದಾಮುಗಳ ಕೀಟ ನಿಯಂತ್ರಣಕ್ಕೆ ಬಳಸಲಾಗುತ್ತಿದೆ. ಡಿಡಿಟಿಯ ಸೇವನೆ ಮಾಡಿದರೆ ಅದು ಮೂತ್ರದೊಂದಿಗೆ ವಿಸರ್ಜನೆಯಾಗುವ ಬದಲು, ದೇಹದ ಅಂಗಾಂಶಗಳಲ್ಲಿ ಶೇಖರವಾಗುತ್ತದೆ. ಇಂಥ ವಿಷಪೂರಿತ ಕೀಟಗಳನ್ನು ಭಕ್ಷಿಸುವ ಏಡಿ, ಕಪ್ಪೆ, ಮೀನುಗಲಲ್ಲೂ ಡಿಡಿಟಿ ಶೇಕರವಾಗಿ, ಅಂತಿಮವಾಗಿ ಇದು ಮನುಷ್ಯರ ದೇಹಕ್ಕೂ ಸೇರ್ಪಡೆಯಾಗುತ್ತದೆ.

ವಿಷಯುಕ್ತ ರಸಾಯನಗಳ ಹಾಗೂ ಕೀಟನಾಶಕಗಳ ಇಂಥ 'ಜೈವಿಕ ಪ್ರಸರಣ' ಕ್ರಿಯೆಯನ್ನು ನೀರಿನಲ್ಲೂ ಕಾಣಬಹುದು. ಕೆರೆಗೆ, ನದಿಗೆ ಸೇರುವ ಔದ್ಯಮಿಕ ಕೊಳಚೆ ರಸಾಯನಗಳಲ್ಲಿ ಪಾದರಸ, ಸೀಸ, ತಾಮ್ರ ಮುಂತಾದ ಭಾರಲೋಹಗಳ ಸಂಯುಕ್ತಗಳು ಕರಗಿದ್ದು ಕ್ರಮೇಣ ಇವು ಜಲಚರಗಳ ದೇಹದಲ್ಲಿ

ಶೇಖರವಾಗುತ್ತವೆ. ಆಹಾರ ಸರಪಳಿಯಲ್ಲಿ ಕೆಳಗಿನ ಹಂತದ ಜೀವಿಗಳನ್ನು ಮೇಲಿನ ಹಂತದ ಜೀವಿಗಳು ತಿನ್ನುವಾಗ ಈ ವಿಷಯುಕ್ತ ರಸಾಯನಗಳೂ ಭಾರಲೋಹ ಕಣಗಳೂ ಹೆಚ್ಚು ಹೆಚ್ಚಿನ ಪ್ರಮಾನದಲ್ಲಿ ಮೇಲಿನ ಹಂತದ ಜೀವಿಗಳ ದೇಹದಲ್ಲಿ ಸೇರ್ಪಡೆಯಾಗುತ್ತವೆ.

ಡಿಡಿಟಿಯಿಂದಾಗಿ ಪಕ್ಷಿಗಳ ಮೇಲೆ, ಅದರಲ್ಲೂ ಕಡಲ ಪಕ್ಷಿಗಳ ಮೇಲೆ ಭಾರೀ ದುಷ್ಪರಿಣಾಮ ಕಂಡುಬರುತ್ತಿದೆ. ಹಕ್ಕಿಯ ಮೊಟ್ಟೆಗಳ ಕವಚ ತುಂಬ ತೆಳುವಾಗುವುದರಿಂದ ಕಾವು ಕೊಡಲು ಕೂತ ತಾಯಿಯ ದೇಹದ ಭಾರಕ್ಕೇ ಅವು ಒಡೆದು ಹಾಳಾಗುತ್ತವೆ.

ಸಮುದ್ರದಲ್ಲಿ ಸಂಚರಿಸುವ ಹಡಗುಗಳಿಂದ ಎಣ್ಣೆ ಜಿಡ್ಡು ಜಿನಗುತ್ತದೆ. ತೈಲ ಸಾಗಣೆ ಹಡಗುಗಳು ಅಪಘಾತಕೀಡಾದರಂತೂ ಎಣ್ಣೆ ಜಿಡ್ಡಿನ ಮಾಲಿನ್ಯ ಗಂಭೀರ ಸ್ವರೂಪದ್ದಾಗುತ್ತದೆ. ಇತ್ತೀಚಿನ ಕೊಲ್ಲಿ ಯುದ್ಧದ ಸಂದರ್ಭದಲ್ಲಿ ಮನುಷ್ಯನ ಚಟುವಟಿಕೆಗಳಿಂದಾಗಿ ನೈಸರ್ಗಿಕ ಜೀವ ಮಂಡಲದ ಮೇಲೆ ಎಂಥ ವಿಧ್ವಂಸಕ ಪರಿಣಾಮ ಉಂಟಾಗಬಲ್ಲುದೆಂಬ ಪ್ರಾತ್ಯಕ್ಷಿಕ ನಮಗೆ ದೊರಕಿದೆ. ಎಣ್ಣೆ ಜಿಡ್ಡು ಕಡಲ ಪಕ್ಷಿಗಳ ಮೈಗೆಲ್ಲ ಅಂಟಿಕೊಂಡು, ಅವುಗಳ ಜೀರ್ಣಾಂಗದೊಳಕ್ಕೂ ಸೇರಿ, ಉಸಿರಾಡಲೂ ಆಗದಂತೆ ಮಾಡುತ್ತವೆ. ನೀರಲ್ಲಿ ಜೀವಿಸುವ ಚಿಕ್ಕಪುಟ್ಟ ಪ್ರಾಣಿಗಳನ್ನೂ, ಸಸ್ಯಗಳನ್ನೂ ನಾಶ ಮಾಡಿ, ಕೊನೆಗೆ ಇವುಗಲನ್ನೇ ಆಹಾರವನ್ನಾಗಿ ಭಕ್ಷಿಸಬೇಕಿದ್ದ ಮೀನುಗಳ ಮೇಲೂ ದುಷ್ಪರಿಣಾಮ ಬೀರುತ್ತದೆ.



ಮನುಷ್ಯನ ಹಸ್ತಕ್ಷೇಪದಿಂದಲೇ ವನ್ಯಸ್ತೋಮ ಹೇಗೆ ಕ್ಷೀಣಿಸುತ್ತದೆಂಬುದಕ್ಕೆ ಇನ್ನು ಅನೇಕ ಕಾರಣಗಳೂ ಉದಾಹರಣೆಗಳೂ ಇವೆ. ಸಮತೋಲನವಲ್ಲದ ಬೇಸಾಯ ಚಟುವಟಿಕೆ, ದೂರದ ಜೀವಿಗಳ ಆಮದು, ಸಾಕುಪ್ರಾಣಿಗಳ ಮೂಲಕ ಬರುವ ಸೋಂಕುರೋಗ, ನದಿಗೆ ಅಡ್ಡಲಾಗಿ ನಿರ್ಮಿಸುವ ಅಣೆಕಟ್ಟು, ಅರಣ್ಯನಾಶದಿಂದಾಗಿ ಬರುವ ಮಹಾಪೂರ ಹಾಗೂ ಬರಗಾಲ ಇವೆಲ್ಲವೂ ಒಟ್ಟೊಟ್ಟಾಗಿ, ಒಂದೊಂದಾಗಿ ವನ್ಯಜೀವಿ ಸಂಕುಲಕ್ಕೆ ಮಾರಕವಾಗುತ್ತಿದೆ; ಜೀವಿಗಳನ್ನು ವಿನಾಶದ ಅಂಚಿಗೆ ತಂದು ನಿಲ್ಲಿಸುತ್ತವೆ. ಯಾವುದೇ ಪ್ರಾಣಿವಂಶ ವಿನಾಶದ ಅಂಚಿಗೆ ಬಂತೆಂದು ಹೇಗೆ ಗೊತ್ತಾಗುತ್ತದೆ? ಯಾವುದೇ ಪ್ರಾಣಿಯ ಸಂಖ್ಯೆ ತೀರ ಸಂದಿಗ್ಧ ಮಟ್ಟಕ್ಕೆ ಇಳಿದಾಗ, ಅಥವಾ ತುರ್ತು ಸಂರಕ್ಷಣಾ ಕ್ರಮ ಕೈಗೊಂಡ ಹೊರತು ಪೀಳಿಗೆ ನಿರ್ವಂಶವೇ ಆಗುತ್ತದೆಂಬಷ್ಟರ ಮಟ್ಟಿಗೆ ಅವುಗಳ ವಾಸಕ್ಷೇತ್ರ ಕ್ಷೀಣಿಸಿದಾಗ ಆ ಪ್ರಾಣಿ ಅಳಿವಿನ ಅಂಚಿಗೆ ಬಂತೆಂದು ಹೇಳುತ್ತೇವೆ.

ಈಗಲೂ ಕಾಲ ಮಿಂಚಿಲ್ಲ!

ನಮ್ಮ ವನ್ಯಲೋಕ ಹೀಗೆ ಬರಿದಾಗುತ್ತಿದ್ದರೂ, ಕೆಲವು ಪ್ರಾಣಿಗಳ ಸಂಖ್ಯೆ ಕಮ್ಮಿಯಾಗುತ್ತಿದ್ದರೂ, ಭಾರತದಲ್ಲಿ ಇಂಥ ಸರ್ವನಾಶದ ಅಲೆಯನ್ನು ಹಿಮ್ಮೊಗ ತಿರುಗಿಸುವ ಹಾಗೂ ಸಂರಕ್ಷಣಾ ಕ್ರಮ ಕೈಗೊಳ್ಳುವ ಸಾಧ್ಯತೆ ಈಗಲೂ ಇದೆ. ಈಗಲೂ ನಮ್ಮ ದೇಶದಲ್ಲಿ ವನ್ಯಜೀವ ಜಗತ್ತು ವೈವಿಧ್ಯಮಯವಾಗಿದೆ; ಸಮೃದ್ಧವಾಗಿದೆ. ಈ ದೇಶದ ಪ್ರಾಣಿಸ್ತೋಮ ಮತ್ತು ಸಸ್ಯಸ್ತೋಮದ ಸಂರಕ್ಷಣೆಗೆ ಈಗೀಗ ಶ್ರದ್ಧಾಪೂರ್ವಕ ಪ್ರಯತ್ನಗಳು ನಡೆಯುತ್ತಿವೆ. (ಇಂಥ ಕೆಲವು ಯತ್ನಗಳ ಬಗ್ಗೆ ಬೇರೊಂದು ಅಧ್ಯಾಯದಲ್ಲಿ ಚರ್ಚಿಸಲಾಗಿದೆ).

ಸಂರಕ್ಷಣೆಯೆಂದರೆ ಏನಕೇನ ಪ್ರಕಾರದಲ್ಲಿ ಮನುಷ್ಯನ ಹಿತವನ್ನು ಕಡೆಗಣಿಸಿ, ವನ್ಯಪ್ರಾಣಿಗಳನ್ನು ಹಿಂದಿನಂತೆಯೇ ಅಲೆಯಲು ಬಿಡುವುದಲ್ಲ. ಸಂರಕ್ಷಣೆಯೆಂದರೆ ನಿಸರ್ಗ ಕ್ಷೀಣಿಸದ ರೀತಿಯಲ್ಲಿ ಪ್ರಾಕೃತಿಕ ಸಂಪತ್ತನ್ನು ಬಳಸಿಕೊಳ್ಳುವುದು. ನಿಸರ್ಗವೇ ಎಲ್ಲ ಜೀವಗಳಿಗೂ ಆಶ್ರಯದಾತ. ನಮ್ಮ ಎಲ್ಲಾ ಬಗೆಯ ಅಗತ್ಯಗಳಿಗೂ ನಾವು ನಿಸರ್ಗವನ್ನೇ ಅವಲಂಬಿಸಿರುತ್ತೇವೆ. ಈ ನಿಸರ್ಗದ ಸಂಪನ್ಮೂಲಗಳ ಅತಿ ಬಳಕೆ ಮಾಡಿದರೆ ಅನಂತ ಕಾಲದವರೆಗೆ ಅದು ಉಳಿಯಲಾರದು. ಸಂರಕ್ಷಣೆ ನಾಲ್ಕು ಸ್ತಂಭಗಳ ಆಧಾರದ ಮೇಲೆ ನಿಂತಿದೆಯೆಂದು ಬಲ್ಲವರು ಹೇಳುತ್ತಾರೆ. ಮೊದಲ ಸ್ತಂಭವೆಂದರೆ ನಮ್ಮ ನೈತಿಕ ಕಳಕಳಿ ಅಥವಾ ನೈತಿಕ ಪ್ರಜ್ಞೆ. ಇಂದಿನ ನೈಸರ್ಗಿಕ ಸಂಪತ್ತನ್ನು ನಮ್ಮ ಮುಂದಿನ ಪೀಳಿಗೆಗೂ ಉಳಿಸಬೇಕೆಂಬ ಪ್ರಜ್ಞೆಯಿದ್ದರೆ, ಇಂದಿನದು ಪೂರ್ತಿಯಾಗಿ ನಶಿಸದಂತೆ ನೋಡಿಕೊಳ್ಳಬೇಕಾದ ನೈತಿಕ ಹೊಣೆಗಾರಿಕೆಯೂ ನಮ್ಮದಾಗಿರುತ್ತದೆ. ಎರಡನೇ ಸ್ತಂಭವೆಂದರೆ ರಸಾಭಿಜ್ಞತೆ ಅಥವಾ ಸೌಂದರ್ಯೋಪಾಸನೆ. ನಿಸರ್ಗ ಸುಂದರವಾಗಿಯೇ ಇರುತ್ತದೆ. ಬಣ್ಣಬಣ್ಣದ ಹೂಗಳು, ಮನಮೋಹಕ ಹಸಿರ ಹಚ್ಚಡ, ಸೊಬಗಿನ ಪಕ್ಷಿಗಳು, ಪಾತರಗಿತ್ತಿಗಳೇ ಮುಂತಾದ ಪ್ರಕೃತಿ ಸೌಂದರ್ಯಕ್ಕೆ ನಾವೆಲ್ಲ ಮನಸೋಲುತ್ತೇವೆ. ಅವುಗಳ ಲಾಲನೆ ಪಾಲನೆ ಹಾಗೂ ಸಂರಕ್ಷಣೆ ನಮ್ಮ ಮನಸ್ಸಿಗೆ ಮುದ ನೀಡುತ್ತದೆ. ಮೂರನೇ ಸ್ತಂಭ ನಮ್ಮದೇ ಉಳಿವು. ಅಂದರೆ ನಮ್ಮ ಬದುಕಿನ ದಿನನಿತ್ಯದ ಅಗತ್ಯಗಳಾದ ಆಹಾರ ಮತ್ತಿತರ ಬಳಕೆ ಸಾಮಗ್ರಿಗಳಿಗೆ ಬೇಕಾದ ಕಚ್ಚಾ ವಸ್ತು. ಈ ಸಂಪತ್ತನ್ನು ಸರಿಯಾಗಿ ಅವು ಹೆಚ್ಚು ಕಾಲ ಉಳಿಯಲಾರವು. ನಾಲ್ಕನೆಯದು ನಮ್ಮ ವೈಜ್ಞಾನಿಕ ಸ್ತಂಭ. ಈ ನಿಸರ್ಗ ಸಂಪತ್ತಿನ ಆಧಾರವಿಲ್ಲದಿದ್ದರೆ ನಮ್ಮ ಯಾವ ವಿಜ್ಞಾನ ತಂತ್ರಜ್ಞಾನ ಸಾಧನೆಗಳೂ ಕೈಗೂಡುತ್ತಿರಲಿಲ್ಲ. ಮನುಷ್ಯನ ಅಭಿವೃದ್ಧಿಗೆಂದು ನಾವು ಕೈಗೊಂಡ ಎಲ್ಲ ಬಗೆಯ ಜ್ಞಾನಾರ್ಜನೆ, ಪ್ರಯೋಗ, ಪರೀಕ್ಷೆಗಳಿಗೆಲ್ಲ ನಿಸರ್ಗವೇ ಮೂಲಾಧಾರ.

ಈಗಂತೂ ಪ್ರಾಣಿ ಮತ್ತು ಸಸ್ಯಗಳೆಂದರೆ ತಳಿಭಂಡಾರವೆಂದೇ ಪರಿಗಣಿಸಲಾಗುತ್ತಿದೆ. ಪಶುಸಂಗೋಪನೆ, ಮೀನುಗಾರಿಕೆ, ಕೋಳಿಸಾಕಣೆಯೇ ಮುಂತಾದ ಚಟುವಟಿಕೆಗಳಿಗೆ ಅಗತ್ಯವಾದ ತಳಿ ಸಂವರ್ಧನೆ, ಮೇವು ತಯಾರಿಕೆಯ ವೈಜ್ಞಾನಿಕ ಸಂಶೋಧನೆಗಳು ನಿಸರ್ಗ ಸಂಪತ್ತಿಲ್ಲದಿದ್ದರೆ ಸಾಧ್ಯವಾಗುತ್ತಿರಲಿಲ್ಲ. ವನ್ಯಲೋಕದ ಸಸ್ಯಸ್ತೋಮ ಹಾಗೂ ಪ್ರಾಣಿಸ್ತೋಮಗಳ ಸಂರಕ್ಷಣೆಯೇ ಈ ಪ್ರಗತಿಯ ಮೂಲಮಂತ್ರವಾಗಿದೆ.





* ಎಸ್.ಎಂ.ನಾಯರ್

ಈ ಲೇಖನದ ಛಾಯಚಿತ್ರಗಳು ಅಂತರ್ಜಾಲದ ಕೃಪೆ

LIFE

ಬಹಳ ದೂರದಿಂದ ಬಂದ ಬೆಳಕು
ಮಬ್ಬು ಕತ್ತಲು,
ಶರವೇಗದಿಂದ ಧಾವಿಸಿದ ವಿದ್ಯುತ್ ಅಯಸ್ಕಾಂತಿಯ ಅಲೆಯು,
ತಡೆದು ನಿಲ್ಲಿಸಿ ಕೇಳಿತು ನೀನ್ಯಾರು?!

ಗಾಳಿಯಲಿ ನೀರಿನಲಿ ಮಣ್ಣಿನಲಿ
ಸುಡುವ ಬೆಂಕಿಯಲಿ ಬೆರೆತಿರುವ
ಮಹಾಸ್ಫೋಟದ ಅನಂತಾಕರ್ಷಣೆಯಲಿ
ಗುಂಯ್‌ಗುಡುತಿದೆ
ನೀನ್ಯಾರು?!

ತೇಲುವೆನು ದೂರಕ್ಕೆ, ಬಾಹ್ಯಕ್ಕೆ,
ನೀಹಾರಿಕೆಗೆ, ಆಕಾಶಗಂಗೆಯಿಂದಾಚೆಗೆ
ಮತ್ತೆ ಕ್ಷಣಾರ್ಧದಲಿ ನಕ್ಷತ್ರ ಕೇಳುವುದು
ನೀನ್ಯಾರು?!

ಆಕಾಶಗಂಗೆಯಾ ಯಾವುದೋ ಮೂಲೆಯಿಂದ
ಪಿರುದನಿಯ ಉತ್ತರವು ಕೇಳುತಿದೆ
ಎಲ್ಲಿಂದಲೋ ಕಾಣೆ
ಸೌರವ್ಯೂಹವು ಕಾಣುತ್ತಿದೆ ಸೂರ್ಯನ ಸಂಸಾರ!
ಬೆಳಕಿನ ವೇಗದಲ್ಲಿ ಉತ್ತರಕೆ ಹುಡುಕಾಟ.

ಅದೋ ಕಾಣುತಿದೆ ನೀಲಿಯಾ ಮಾಯೆ
ನಯದಿಂದ ಉತ್ತರಸಿದೆ ಭೂಮಿ
ಅನಂತ ಜೀವಿಗಳ ಹುಟ್ಟು ಸಾವಿನ ಚಕ್ರ
ನಾನೇ ಜೀವ.

– ಶಂಕರಪ್ಪ.ಕೆ.ಪಿ